ಅಹ್ಮದ್ ಒಂದು ಕ್ಷಣ ಅಲೋಚನೆ ಮಾಡಿದವನಿಗೆ ಮಗುವನ್ನು ಮಾತ್ರ ಕರೆದು ಮಾತನಾಡಿದರೆ ಸರಿ ಎಂದೆನಿಸಿತು.

'ಆಯ್ತು ಈಗ ಮಗುವನ್ನು ಇಲ್ಲಿಗೆ ಕಳಿಸು. ಮೆಟರ್ನಲ್ ಮತ್ತು ಪೆಟರ್ನಲ್ ಗ್ರಾಂಡ್ ಮದರ್‌ಗಳನ್ನು ಅಲ್ಲೇ ಇರಲು ಹೇಳು.' ಎಂದ. ಯಾಕೋ ಅವನಿಗೆ ಒಮ್ಮೆಲೇ ಕನ್ನಡ ಭಾಷೆಯಲ್ಲಿ ಸಂವಹನಕ್ಕೆ ಸೂಕ್ತ ಪದಗಳೇ ಇಲ್ಲ ಎಂದೆನಿಸಿತು. ಅವನು ತನ್ನೆದುರಲ್ಲಿ ತಾನೇ ಸಮರ್ಥನೆ ಮಾಡತೊಡಗಿದ. ಈಗ ನೋಡಿ ಕನ್ನಡದಲ್ಲಿ ಪೆಟರ್ನಲ್ ಮತ್ತು ಮೆಟರ್ನಲ್ ಗ್ರಾಂಡ್ ಮದರ್ ಎಂದರೆ ಕನ್ನಡದಲ್ಲಿ ಒಂದೇ ಶಬ್ದದಲ್ಲಿ ಅಜ್ಜಿ; ಅಂದರೆ ಯಾವ ಅಜ್ಜಿ? ಈಗ ತಾನು ಏನು ಆರ್ಡರ್ ಬರೆಯಬೇಕು? ಅಜ್ಜಿ ಎಂದರೆ ಮುಗೀತಾ? ಅದೇ ಉರ್ದುವಿನಲ್ಲಿ ನೋಡಿದರೆ ನಾನಿ ಮತ್ತು ದಾದಿ ಎಂದೆನ್ನುತ್ತಾರೆ. ಹಾಗೆಯೇ ತಾತ ಅಂದರೆ ಮುಗೀತು ಕನ್ನಡದಲ್ಲಿ... ಯಾವ ತಾತ? ಅದು ಅವರವರಿಗೆ ಬಿಟ್ಟಿದ್ದು. ಉರ್ದುವಿನಲ್ಲಿ ಆದರೆ ನಾನಾ ಮತ್ತು ದಾದಾ ಅಂತ ಹೇಳಿದರೆ ಗಣಿತದ ಲೆಕ್ಕಾಚಾರದಷ್ಟು ನಿಖರವಾದದ್ದು. ಹಾಗೆಯೇ ಚಿಕ್ಕಮ್ಮ ಅಂದರೆ ಯಾರು? ಕನ್ನಡದಲ್ಲಿ ಚಿಕ್ಕಮ್ಮ ಅಂದರೆ ತಾಯಿಯ ತಂಗಿ, ಮಲತಾಯಿ, ಚಿಕ್ಕಪ್ಪನ ಹೆಂಡತಿ, ಹೀಗೆ ಮುಂದುವರೆಯುತ್ತದೆ. ಮತ್ತೆ ಅತ್ತೆ ಎಂಬುದರ ಪರಿಭಾಷೆಯಲ್ಲಿ ಯಾರು ಯಾರು ಬರುತ್ತಾರೆ ಅಂದರೆ ಪತಿಯ ತಾಯಿ, ಮಾವನ ಹೆಂಡತಿ ಮೊದಲಾದವರು. ಸದ್ಯ ಸೋದರತ್ತೆ ಅನ್ನೋದೊಂದು ಇದೆಯಲ್ಲ! ಹಾಗೆಯೇ ಭಾವ ಅಂದರೆ ವಿಸ್ತಾರವಾದ ಸಂಬಂಧಗಳು ಅದರ ಅಡಿಯಲ್ಲಿ ಬರುತ್ತವೆ. ಗಂಡನ ಅಣ್ಣ, ಅಕ್ಕನ ಗಂಡ, ಇನ್ನೂ ಸೋದರಿಕೆ ಸಂಬಂಧದವರು ಎಲ್ಲರೂ ಸೋದರಿಕೆ ಎಂಬ ವಿಶಾಲ ಛತ್ರಿಯಡಿಯಲ್ಲಿ ಸೇರಿ ಹೋಗುತ್ತಾರೆ. ಸದ್ಯ ಈ ಮೆಟರ್ನಲ್ ಮತ್ತು ಪೆಟರ್ನಲ್ ಗ್ರಾಂಡ್ ಮದರ್‌ಗಳ ವ್ಯವಹಾರಕ್ಕೆ ಬಂದರೆ ಆ ಮಗುವನ್ನು ಯಾರ ಸುಪರ್ದಿಗೆ ನೀಡುವುದು? ಇದು ಬೇಡದ ಜಿಜ್ಞಾಸೆ. ಕೇಸ್‌ನಲ್ಲಿ ತೀರ್ಮಾನ ಕೈಗೊಳ್ಳಲು ತನಗೆ ಆಗುತ್ತಿರುವ ಮುಜುಗರದಿಂದ ತಪ್ಪಿಸಿಕೊಳ್ಳಲು ತನ್ನ ಮನಸ್ಸು ಏನೇನೋ ಅಡ್ಡದಾರಿ ಹಿಡಿಯುತ್ತಿದೆ ಎಂದು ಅವನು ಅಂದು ಕೊಳ್ಳುತ್ತಿರುವರಲ್ಲಿ ಅವಳು ಮೆಲುನಡಿಗೆಯಲ್ಲಿ ನಡೆದು ಬಂದಳು.

ಕಳೆದ ಸಾರಿ ಅವಳನ್ನು ಕೋರ್ಟಿನಲ್ಲಿ ನೋಡಿದಾಗ ಅವಳು ಅಂದರೆ, ದೀಪಾ ಎಂಬ ಆ ಪುಟ್ಟ ಚಿಲುಮೆ ತೆಳು ಗುಲಾಬಿ ಬಣ್ಣದ ಪುಟ್ಟ ಪುಟ್ಟ ಹೂಪ್ರಿಂಟ್‌ಗಳ ಫ್ರಾಕನ್ನು ತೊಟ್ಟಿದ್ದು, ಇನ್ನೂ ಮಗುವಿನಂತೆ ಕಾಣುತ್ತಿದ್ದಳು. ಈಗ ನೋಡಿದರೆ ಜೀನ್ಸ್ ಪ್ಯಾಂಟ್ ಮತ್ತು ಟೀಶರ್ಟ್ ತೊಟ್ಟಿದ್ದ ಆಕೆ ಗಂಭೀರ ನಡಿಗೆಯೊಂದಿಗೆ ಬರುತ್ತಿದ್ದಾಳೆ ಎಂದೆನಿಸಿತು. ಅಷ್ಟೇ ಅಲ್ಲದೆ ಒಂದಿಷ್ಟು ತೆಳುವಾಗಿದ್ದಾಳೆ ಎಂದು ಕೂಡ ಅವನಿಗೆ ಅನ್ನಿಸಿತು. ಅಯ್ಯೋ ದೇವರೇ, ನಾನು ಇವಳ ಬಗ್ಗೆ ಎಷ್ಟು ಕರಾರುವಾಕ್ಕಾಗಿ ವಿಷಯಗಳನ್ನು ನನ್ನ ಮನಸ್ಸಿನಲ್ಲಿ ಹಸುರಾಗಿ ಇಟ್ಟಿದ್ದೇನೆ ಎಂದು ಆಲೋಚಿಸಿದಾಗ ಅವನಿಗೆ ಆಶ್ಚರ್ಯವಾಯಿತು. ಬದುಕಿನ ಅವಘಡಗಳು ವಯಸ್ಸು, ಮನಸ್ಸು ಮತ್ತು ವ್ಯಕ್ತಿತ್ವವನ್ನು ಹೇಗೆ ಮಾಗಿಸುತ್ತವೆ... ಇನ್ನೇನೇನು ನೋಡ ಬೇಕಿದೆಯೋ ಪಾಪ ಈ ಮಗು.

ಅವನು ಅವಳತ್ತ ನಗೆ ಮುಖವನ್ನು ಬೀರಿದ. ಅವಳು ಕೂಡ ತುಟಿಯನ್ನು ಒಂದಿಷ್ಟೇ ಅರಳಿಸಿದಳು. 'ಬಾ ಕುತ್ಕೋ ಕೂತ್ಕೋ' ಎಂದು ಅವನು ತನ್ನ ಎದುರಿನ ಕುರ್ಚಿಯನ್ನು ತೋರಿದ. ಅವಳು ಕುಳಿತಳು. ಮುಂದೆ ಏನು ಮಾತನಾಡಬೇಕೆಂದು ಅವನು ಆಲೋಚಿಸುತ್ತಾ, 'ನಿನ್ನ ಹೆಸರೇನು ಬೇಬಿ? ನನಗೆ ಮರೆತು ಹೋಯಿತಲ್ಲಾ' ಎಂದು ಬೇಕೆಂತಲೇ ತಲೆ ಕೆರೆದುಕೊಂಡ. ಅವಳು ಎಷ್ಟು ಮುಗ್ಧವಾಗಿ ನಿಷ್ಕಲ್ಮಶ ನಗುವೊಂದನ್ನು ಬೀರಿದಳೆಂದರೆ, ಸಮುದ್ರದ ಅಲೆಯೊಂದು ಮೆಲುವಾಗಿ ತೇಲಿ ಬಂದು ಅವನ ಪಾದಗಳನ್ನು ತೋಯಿಸಿದಂತಾಯಿತು.

'ಮತ್ತೆ ಹಿಂದಿನ ಸಾರಿ ಹೋದ ಸಾರಿ ಎಲ್ಲಾ ಹೇಳಿದರೂ ನೀವು ನನ್ನ ಹೆಸರನ್ನು ಮರೀತೀರಾ.